ಸಾಕ್ಷಿಗೆ ದಿಃ16.10.2025 ರಂದು ಪ್ರಮಾಣ ವಚನ ಭೋದಿಸಲಾಯಿತು

ಮುಂದುವರಿದು ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

4. ಆರೋಪಿ ಗೌಡ ಜಾತಿಗೆ ಸೇರಿದವರು. ಆರೋಪಿಯು ಅವರ ಮನೆಯ ಪಕ್ಕದಲ್ಲಿರುವ ನಮ್ಮ ಸೈಟನ್ನು ಕೊಡಬೇಕೆಂದು ಗಲಾಟೆ ಮಾಡಿ ನನ್ನನ್ನು ಕೋಲಿನಿಂದ ಚೆನ್ನಾಗಿ ಹೊಡೆದಿದ್ದು ನನಗ ರಕ್ತ ಬಂದಿರುತ್ತದೆ. ಕೀಳು ಜಾತಿಯವನು ಎಂದು ಬೈದು ಸೈಟ್ ಕೊಡಲಿಲ್ಲವಾದರೆ ಕೊಲೆ ಮಾಡುತ್ತೇನೆಂದು ಬೆದರಿಕೆ ಹಾಕಿರುತ್ತಾರೆ. ಅಲ್ಲಿದ್ದ ಸಾರ್ವಜನಿಕರು ನನ್ನನ್ನು ಆಸ್ಪತ್ರೆಗೆ ಸೇರಿಸಿದ್ದರು. ಗಲಾಟೆ ಬಗ್ಗೆ ಅದೇ ದಿನ ನಾನು ದೂರು ನೀಡಿದ್ದೆ. ಈಗ ನಾನು ದೂರನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ದೂರನ್ನು ನಿಪಿ-1 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರ್ತಿಸಲಾಯಿತು.

5. ನಾನು ದೂರು ನೀಡಿದ ದಿನ ಮತ್ತು ಮರುದಿನ ಪೋಲಿಸರು ವಿಚಾರಣೆಗೆ ಘಟನಾ ಸ್ಥಳಕ್ಕೆ ಬಂದಿದ್ದರು. ಈಗ ನಾನು ಒಂದು ದಾಖಲೆ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ದಾಖಲೆ ಪಂಚನಾಮೆ ಇದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ಪಂಚನಾಮೆಯನ್ನು ನಿಪಿ-2 ಎಂದು ಹಾಗೂ ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಿಪಿ-2 ಸಹಿಯನ್ನು ಎಲ್ಲಿ ಯಾವಾಗ ಮಾಡಿದ್ದೆನು ಎಂದು ನನಗೆ ನೆನಪಿಲ್ಲ. ಸಾಕ್ಷಿ ನ್ಯಾಯಾಲಯದಲ್ಲಿ ಹಾಜರುಪಡಿಸಿದ ದೊಣ್ಣೆಯನ್ನು ನೋಡಿ ಇದೇ ದೊಣ್ಣೆಯಿಂದ ಆರೋಪಿ ನನ್ನ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಸದರಿ ದೊಣ್ಣೆಯನ್ನು ಮು.ಮಾ-1 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎಸ್ ಪಿಪಿ ರವರು ವಿನಂತಿಸಿದ್ದರಿಂದ ಸಾಕ್ಷಿಯ ಹೇಳಿಕೆ ಹಾಗೂ ಇತರೆ ನ್ಯಾಯಾಲಯದ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

6. ಪೋಲಿಸರು ನಾನು ದೂರು ನೀಡಿದ ಮಾರನೇ ದಿನ ಘಟನ ನಡೆದ ಸ್ಥಳಕ್ಕೆ ಬಂದಿದ್ದು ನಾನು ಸ್ಥಳ ತೋರಿಸಿ ಆರೋಪಿ ನನಗೆ ಹೊಡೆದ ದೊಣ್ಣೆಯನ್ನು ಹಾಜರುಪಡಿಸಿದ್ದರ ಮೇರೆಗೆ ಪೋಲಿಸರು ಅದನ್ನು ಜಪ್ತಿ ಪಡಿಸಿಕೊಂಡು ನಿಪಿ-2 ಪಂಚನಾಮೆ ಜರುಗಿಸಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿ. ಚಾಸಾ-2 ಮತ್ತು 7 ರವರು ಹಾಜರಿದ್ದು ಸಹಿ ಮಾಡಿದ್ದಾರೆ ಎಂದರೆ ಚಾಸಾ-2 ಸ್ಥಳದಲ್ಲಿದ್ದರು ಎಂದು ಹೇಳುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಎ ವಕೀಲರಿಂದಃ</u>**

7. ಈಗ ನನಗೆ ಕನ್ನಡಕ ಹಾಕಿಕೊಂಡರೆ ಕಾಣಿಸುತ್ತದೆ. ಕಿವಿ ಸ್ವಲ್ಪ ಕೇಳುತ್ತದೆ. ನಾನು ಕಳೆದ 25 ವರ್ಷಗಳಿಂದ ಅಲ್ಲಿ ಮನೆ ಕಟ್ಟಿಕೊಂಡು ವಾಸವಿದ್ದೇವೆ. ನಾನು ಮನೆ ಕಟ್ಟಿ ವಾಸ ಮಾಡತೊಡಗಿದ ನಂತರ ಆರೋಪಿಯು ಸಹ ಮನೆ ಕಟ್ಟಿಕೊಂಡು ಅಲ್ಲಿ ವಾಸವಾಗಿದ್ದಾರೆ. ನಾನು ಮನೆ ಕಟ್ಟುವಾಗ ಯಾವುದೇ ಜಗಳ ಇರಲಿಲ್ಲ. ಕಳೆದ ಹತ್ತು ವರ್ಷಗಳಿಂದ ಮಾತ್ರ ನಮಗೂ ಮತ್ತು ಆರೋಪಿಗೂ ಜಗಳ ಇರುತ್ತದೆ.

8. ನಾನು ಸೈಟ್ ತೆಗೆದುಕೊಂಡು 15 ವರ್ಷಗಳಾದವು. ಆರೋಪಿ ಮೂರು ಸೈಟಿನಲ್ಲಿ ಮೂರು ಮಹಡಿಯ ಮನೆಗಳನ್ನು ಕಟ್ಟಿಸಿದ್ದಾರೆ. ನಾನು ಸೈಟು ಖರೀದಿ ಮಾಡುವಾಗ, ಹೆಚ್ಚು ಹಣ ಕೊಡುತ್ತೇನೆ ನನಗೆ ಸೈಟ್ ಮಾರಾಟ ಮಾಡಿ ಎಂದು ನನಗೆ ಸೈಟ್ ಮಾರಾಟ ಮಾಡಿದವರಿಗೆ ಆರೋಪಿ ಕೇಳಿರುತ್ತಾರೆ. ಈ ಸೈಟ್ ವಿಚಾರವಾಗಿ 15 ವರ್ಷಗಳಿಂದ ಜಗಳವಾಗುತ್ತಿತ್ತು. ಈ ಸೈಟಿನ ವಿಚಾರವಾಗಿ ಈ ಪ್ರಕರಣ ದಾಖಲಾಗುವ ಮುಂಚೆ ಯಾವುದೇ ಕೇಸನ್ನು ನಾನು ಹಾಕಿಲ್ಲ ಹಾಗೂ ನಾನು ದೂರು ನೀಡಿಲ್ಲ. ಸಣ್ಣ ಸಣ್ಣ ಬಾಯಿ ಜಗಳ ಆಗಿದ್ದುದ್ದರಿಂದ ನಾನು ಈ ದೂರಿನ ಮುಂಚೆ ಬೇರೆ ದೂರು ನೀಡಿರುವುದಿಲ್ಲ.

9. ದಿಃ15.05.2019 ರಂದು ಆರೋಪಿ ನನ್ನೊಂದಿಗೆ ಗಲಾಟೆ ಮಾಡಿದ್ದರು. ಆರೋಪಿ ಹಾಗೂ ನನ್ನ ನಡುವೆ ಯಾವುದೇ ಗಲಾಟೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಗಲಾಟೆಗೂ ಮುಂಚೆ ಆರೋಪಿ ಜಾನ್ ಎಂಬುವವರೊಂದಿಗೆ ಜಗಳವಾಡುತ್ತಿದ್ದರು. ಆರೋಪಿಯ ಕಾರ್ ಜಾನ್ ಎನ್ನುವವರ ಕಾರಿಗೆ ಟಚ್ ಆಯಿತು ಎಂದು ನಾನು ದೂರಿನಲ್ಲಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಜಾನ್ ಹಾಗೂ ಆರೋಪಿಯ ನಡುವೆ ಎಷ್ಟು ಘಂಟೆಗೆ ಗಲಾಟೆ ಆಗಿತ್ತು ಎಂದು ನನಗೆ ಹೇಳಲು ಆಗುವುದಿಲ್ಲ. ನಾನು ಸದರಿ ಗಲಾಟೆ ನೋಡಲು ಹೋದಾಗ ನನ್ನೊಂದಿಗೆ ಆರೋಪಿ ಜಗಳ ಮಾಡಿದರು.

10. ಆರೋಪಿಯ ಮನೆಯ ಪಕ್ಕದಲ್ಲಿರುವ ಸೈಟ್ ನನ್ನ ಮಗನ ಹೆಸರಿನಲ್ಲಿದೆ ಎಂದರೆ ಸರಿ. ಆರೋಪಿ ನನ್ನೊಂದಿಗೆ ಗಲಾಟೆ ಮಾಡದೇ ಇದ್ದರೂ ಸಹ ನಾನು ಆರೋಪಿಯ ವಿರುದ್ಧ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಆ ದಿನ ಬೇರೆ ಯಾವುದೇ ಸೈಟಿಗೆ ಸಂಬಂಧಪಟ್ಟಂತೆ ಮನಸ್ಸಿನಲ್ಲಿ ಇಟ್ಟುಕೊಂಡು ದೂರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನೇ ಆರೋಪಿಯ ಮೇಲೆ ಜಗಳ ಮಾಡಿ ಆರೋಪಿಗೆ ತೊಂದರೆ ನೀಡಲು ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

11. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿ ಆ ದಿನ ನನ್ನೊಂದಿಗೆ ಜಗಳ ಮಾಡಿರುವುದಿಲ್ಲ, ಅವಾಚ್ಯವಾಗಿ ಬೈದಿರುವುದಿಲ್ಲ, ಜಾತಿ ನಿಂದನೆ ಮಾಡಿರುವುದಿಲ್ಲ ಹಾಗೂ ದೊಣ್ಣೆಯಿಂದ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನ ಮಗನಿಗೂ ಸಹ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

12. ನಾನು ಆ ದಿನ ನನಗೆ ಯಾರು ಹಲ್ಲೆ ಮಾಡಿರುವುದಿಲ್ಲ ಹಾಗೂ ಯಾವುದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಘಟನೆಯನ್ನು ಅಕ್ಕಪಕ್ಕದ ಮನೆಯವರು ನೋಡಿರುತ್ತಾರೆ. ನ್ಯಾಯಾಲಯದ ಮುಂದೆ ಕಟಕಟೆಯಲ್ಲಿ ಯಾರು ನಿಂತಿದ್ದಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಆರೋಪಿ ನಿಂತಿರುತ್ತಾರೆ. ನಾನು ಹೇಳಿದಂತೆ ಸ್ಥಳದಲ್ಲಿ ಆ ಸಮಯದಲ್ಲಿ ಅಕ್ಕಪಕ್ಕದವರು ಇರಲಿಲ್ಲ ಎಂದರೆ ಸರಿಯಲ್ಲ. ನನ್ನ

ಸೈಟಿಗಾಗಿ ನಾನು ಸುಳ್ಳು ದೂರು ನೀಡಿ ಕಾನೂನು ದುರ್ಬಳಕೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

13. ಮು.ಮಾ-1 ಇದನ್ನು ನಾನು ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸಾಕ್ಷಿ ಇದೇ ಕೋಲಿನಲ್ಲಿ ಆರೋಪಿ ನನಗೆ ಹೊಡೆದಿದ್ದರು ಎಂದು ಹೇಳುತ್ತಾರೆ. ಮು.ಮಾ-1 ಕೋಲಿನಿಂದಲೇ ಆರೋಪಿ ನನಗೆ ಹೊಡೆದಿದ್ದು ಎಂದು ಹೇಳಲು ಯಾವುದೇ ವಿಶೇಷ ಗುರುತುಗಳು ಇಲ್ಲ ಎಂದರೆ ಸಾಕ್ಷಿ ಇದೇ ಕೋಲಿನಿಂದ ನನ್ನ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಘಟನೆಯ ಮರುದಿನ ಹಾಗೂ ಅದರ ಮಾರನೇ ದಿನವೂ ಸಹ ಪೋಲಿಸರು ಸ್ಥಳಕ್ಕೆ ಬಂದಿದ್ದರು. ನಿಪಿ-2 ಪಂಚನಾಮೆಗೆ ನಾನು ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಮನೆಯ ಹತ್ತಿರ ಬಂದು ಸಹಿ ತೆಗೆದುಕೊಂಡಿದ್ದರು ಎಂದು ಹೇಳುತ್ತಾರೆ. ನಾನು ಮನೆಯ ಬಳಿ ನಿಪಿ-2 ಕ್ಕೆ ಸಹಿ ಮಾಡಿರದೇ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಢೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು